ಜುಲೈ - 2020

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ

## ಸಾಮುದಾಯಿಕ ಶೌಚಾಲಯ ಅಭಿಯಾನ

ವಿಶ್ವದಾದ್ಯಂತ ಕೊರೋನಾ ವೈರಸ್ ಸಾಂಕ್ರಾಮಿಕವಾಗಿ ಹರಡುತ್ತಿರುವ ಇಂತಹ ಸನ್ನಿವೇಶದಲ್ಲಿ, ಕೆಲಸದ ನಿಮಿತ್ತ ಇತರೆ ಪ್ರದೇಶಗಳಿಗೆ ವಲಸೆ ಹೋಗಿದ್ದ ಬಹಳಷ್ಟು ಮಂದಿ ಕೂಲಿ ಕಾರ್ಮಿಕರು ಮರಳಿ ತಮ್ಮ ಸ್ವಂತ ಗ್ರಾಮಗಳಿಗೆ ಹಿಂದಿರುಗುತಿದ್ದಾರೆ. ಹೀಗೆ ತಮ್ಮ ತಮ್ಮ ಗ್ರಾಮಗಳಿಗೆ ವಾಪಸ್ಸಾಗಿರುವಂತಹ ಜನರಿಗೆ ನೈರ್ಮಲ್ಯ ಸೌಲಭ್ಯಗಳನ್ನು ಕಲ್ಪಿಸಬೇಕಿದ್ದು, ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಜಲಶಕ್ತಿ ಮಂತ್ರಾಲಯ ದೇಶವ್ಯಾಪಿ ಎಲ್ಲಾ ಗ್ರಾಮಗಳಲ್ಲಿ ಸಮುದಾಯ ಶೌಚಾಲಯವನ್ನು ನಿರ್ಮಿಸಿ ಬಳಸಲು ಉತ್ತೇಜಿಸುವ ಸಲುವಾಗಿ **15ನೇ ಜೂನ್ 2020 ರಿಂದ 15ನೇ ಸೆಪ್ಟಂಬರ್ 2020** ರವರೆಗೆ ಮೂರು ತಿಂಗಳ ಕಾಲ **"ಸಾಮುದಾಯಿಕ ಶೌಚಾಲಯ ಅಭಿಯಾನ"**ವನ್ನು ಹಮ್ಮಿಕೊಂಡಿದೆ. ಸಮುದಾಯ ಶೌಚಾಲಯ ನಿರ್ಮಾಣ, ನಿರ್ವಹಣೆ ಮಾಡಲು ಜಿಲ್ಲೆ ಮತ್ತು ಗ್ರಾಮಗಳನ್ನು ಸಜ್ಜುಗೊಳಿಸುವುದು ಆಂದೋಲನದ ಮುಖ್ಯ ಉದ್ದೇಶವಾಗಿದ್ದು, ರಾಜ್ಯದಲ್ಲಿಯೂ ಈಗಾಗಲೇ ಮಂಜೂರಾಗಿರುವ ಸಮುದಾಯ ಶೌಚಾಲಯಗಳ ನಿರ್ಮಾಣ ಮತ್ತು ಅಗತ್ಯವಿರುವ ಗ್ರಾಮಗಳಲ್ಲಿ ಹೊಸದಾಗಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸುವ ನಿಟ್ಟಿನಲ್ಲಿ ಕೆಲಸ ಆರಂಭವಾಗಿದೆ. ಈ ಕಾಲಾವದಿಯಲ್ಲಿ ಅತ್ಯುತ್ತಮ ಕೆಲಸ ಮಾಡಿದ 3 ಜಿಲ್ಲೆಗಳು ಮತ್ತು 3 ತಾಲ್ಲೂಕುಗಳಿಗೆ ಹಾಗೂ ರಾಜ್ಯಗಳು ನಾಮನಿರ್ದೇಶನ ಮಾಡಿದ 3 ಗ್ರಾಮ ಪಂಚಾಯತಿ ಅಧ್ಯಕ್ಷರುಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಸಮಾರಂಭದಲ್ಲಿ ಪುರಸ್ಕಾರ ನೀಡಿ ಗೌರವಿಸಲಾಗುವುದು.






## ಸಾಮಾಜಿಕ ಮಾಧ್ಯಮ ಸ್ಪರ್ಧೆ

ಗ್ರಾಮೀಣ ಜನರನ್ನು ಪರಿಣಾಮಕಾರಿಯಾದ ಸಂದೇಶಗಳೊಂದಿಗೆ ಬಹುಬೇಗನೆ ತಲುಪುವ ನಿಟ್ಟಿನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವಿವಿಧ ಸಾಮಾಜಿಕ ಮಾಧ್ಯಮಗಳನ್ನು ನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪ್ರತ್ಯೇಕವಾದ ಫೇಸ್‌ಬುಕ್ ಪೇಜ್‌ಗಳನ್ನು ಸೃಜಿಸಲಾಗಿದ್ದು ಇದೀಗ ಜಿಲ್ಲಾವಾರು ಪೇಜ್‌ಗಳ ಹಿಂಬಾಲಕರನ್ನು ಹೆಚ್ಚಿಸಬೇಕಿದೆ. ಆದುದರಿಂದ 16 ಜುಲೈ 2020 ರಿಂದ 15 ಸೆಪ್ಟಂಬರ್ 2020 ರವರೆಗೆ ಎರಡು ತಿಂಗಳ ಕಾಲ ಜಿಲ್ಲೆಗಳ ನಡುವೆ "ಸಾಮಾಜಿಕ ಮಾಧ್ಯಮ ಸ್ಪರ್ಧೆ" ಏರ್ಪಡಿಸಲಾಗಿದೆ. ಸ್ಪರ್ಧೆಯ ಅವಧಿಯಲ್ಲಿ ಅತ್ಯಧಿಕ ಹಿಂಬಾಲಕರನ್ನು ಹೊಂದುವ ಮೂರು ಜಿಲ್ಲೆಗಳಿಗೆ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನಗಳನ್ನು ನೀಡಿ ಗೌರವಿಸಲಾಗುತ್ತದೆ.

## ತರಬೇತಿ ಕಾರ್ಯಕ್ರಮಗಳು

1 ಸ್ವಚ್ಛ ಭಾರತ್ ಮಿಷನ್ (ಗ್ರಾ) ನಡಿಯಲ್ಲಿ ರಾಜ್ಯ ಕಚೇರಿಗೆ ಮತ್ತು ಜಿಲ್ಲೆಗಳಿಗೆ ಹೊಸದಾಗಿ ನೇಮಕಗೊಂಡಿರುವ 39 ಸಮಾಲೋಚಕರುಗಳಿಗೆ 22 ಜೂನ್ 2020 ರಿಂದ 24 ಜೂನ್ 2020 ರವರೆಗೆ ಮೂರು ದಿನಗಳ ಕಾಲ ತರಬೇತಿಯನ್ನು ನೀಡಲಾಯಿತು. ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಬಗ್ಗೆ ಮತ್ತು ಸಮಾಲೋಚಕರುಗಳ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ತರಬೇತಿ ನೀಡಲಾಯಿತು. ಮೂರು ದಿನಗಳ ಕಾಲ ನಡೆದ ಈ ತರಬೇತಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿ ಸಹಾಯಕ ನಿರ್ದೇಶಕರು, ನಿರ್ದೇಶಕರು (ISA), ಯುನಿಸೆಫ್ ರಾಜ್ಯ ಸಂಯೋಜಕರು, ಐ.ಇ.ಸಿ & ಹೆಚ್.ಆರ್.ಡಿ ರಾಜ್ಯ ಸಮಾಲೋಚಕರು ಸೇರಿದಂತೆ ಇತರೆ ಸಂಪನ್ಮೂಲ ವ್ಯಕ್ತಿಗಳು ತರಬೇತಿಯನ್ನು ನೀಡಿದರು.





2 ಸ್ವಚ್ಛ ಭಾರತ್ ಮಿಷನ್(ಗ್ರಾ) ಮತ್ತು ಜಲಜೀವನ್ ಮಿಷನ್ ಯೋಜನೆಗಳ ಅನುಷ್ಠಾನ ಕುರಿತ ಪರಿಣಾಮಕಾರಿಯಾದ ಛಾಯಾಚಿತ್ರಗಳು ಮತ್ತು ವೀಡಿಯೋಗಳು ಸಾಮಾಜಿಕ ಮಾಧ್ಯಮಗಳಲ್ಲಿ ಗ್ರಾಮೀಣ ಜನರನ್ನು ತಲುಪುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛ ಭಾರತ್ ಮಿಷನ್ (ಗ್ರಾ)ನ ಐ.ಇ.ಸಿ ಮತ್ತು ಹೆಚ್.ಆರ್.ಡಿ ಸಮಾಲೋಚಕರುಗಳಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ದಿನಾಂಕ 10–07–2020 ರಂದು ಸಾಮಾಜಿಕ ಮಾಧ್ಯಮ ನಿರ್ವಹಣೆ ಮತ್ತು ಪರಿಣಾಮಕಾರಿ ಬಳಕೆ ಕುರಿತು ತರಬೇತಿ ನೀಡಲಾಯಿತು. ನಿರ್ದೇಶಕರು (ISA) ನೇತೃತ್ವದಲ್ಲಿ ನಡೆದ ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯ ಐ.ಇ.ಸಿ ಸಮಾಲೋಚಕರುಗಳು ಮತ್ತು ಸಾಮಾಜಿಕ ಮಾಧ್ಯಮ ತಂಡದ ಮುಖ್ಯಸ್ಥರು ಮತ್ತು ಸದಸ್ಯರು ಹಾಜರಿದ್ದರು.

3 ಜೊತೆಗೆ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿ ಕುರಿತು 03 ಜುಲೈ 2020 ರಿಂದ 09 ಜುಲೈ 2020 ರವರೆಗೆ ಸುಮಾರು 07 ದಿನಗಳ ಕಾಲ ರಾಜ್ಯದ ಎಲ್ಲಾ ಜಿಲ್ಲಾ SLWM ಸಮಾಲೋಚಕರು, ಸ್ವಚ್ಛ ಭಾರತ್ ಮಿಷನ್ (ಗ್ರಾ)ನ ಎಲ್ಲಾ ಜಿಲ್ಲಾ ಪಂಚಾಯತಿಯ ನೋಡಲ್ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ಪ್ರತೀ ತಾಲ್ಲೂಕಿನಿಂದ ಆಯ್ದ ಇಬ್ಬರು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಈ ತರಬೇತಿ ನೀಡಲಾಯಿತು. ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ತರಬೇತಿಯಲ್ಲಿ ಸುಮಾರು 06 ಬ್ಯಾಚ್‌ಗಳನ್ನಾಗಿ ವಿಂಗಡಿಸಿ ಒಟ್ಟು 979 ಮಂದಿಗೆ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ತಯಾರಿ ಕುರಿತು ಮಾಹಿತಿ ನೀಡಲಾಯಿತು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ನಿರ್ದೇಶಕರು, ನಿರ್ದೇಶಕರು (ISA), ಯುನಿಸೆಫ್ ರಾಜ್ಯ ಸಂಯೋಜಕರು ಮತ್ತು ರಾಜ್ಯ SLWM ಸಮಾಲೋಚಕರು ತರಬೇತಿ ನೀಡಿದರು.

4 ಸಾಮುದಾಯಿಕ ಶೌಚಾಲಯ ಅಭಿಯಾನ ಕುರಿತು ಸ್ವಚ್ಛ ಭಾರತ್ ಮಿಷನ್ (ಗ್ರಾ)ನ ಎಲ್ಲಾ ಜಿಲ್ಲಾ ಸಮಾಲೋಚಕರುಗಳಿಗೆ 14 ಜುಲೈ 2020 ರಂದು ವೀಡಿಯೋ ಕಾನ್ಫರೆನ್ಸ್ ಮೂಲಕ ತರಬೇತಿ ನೀಡಲಾಯಿತು. ಸಹಾಯಕ ನಿರ್ದೇಶಕರು, ನಿರ್ದೇಶಕರು (ISA), ಯುನಿಸೆಫ್ ರಾಜ್ಯ ಸಂಯೋಜಕರು, ಐ.ಇ.ಸಿ & ಹೆಚ್.ಆರ್.ಡಿ ರಾಜ್ಯ ಸಮಾಲೋಚಕರು ಜಿಲ್ಲಾ ಸಮಾಲೋಚಕರುಗಳಿಗೆ ತರಬೇತಿ ನೀಡಿದರು.

5 ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯ ಹಂತ–2 ರ ODF Plus Baseline ಕುರಿತು ODF Plus Baseline Survey App ಬಳಸಿಕೊಂಡು ಮೌಲ್ಯಮಾಪನ ಮಾಡುವ ಕುರಿತು 20 ಜುಲೈ 2020 ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ನೊಡಲ್ ಅಧಿಕಾರಿಗಳು ಮತ್ತು ಸ್ವಚ್ಛ ಭಾರತ್ ಮಿಷನ್ (ಗ್ರಾ) ನ ಎಲ್ಲಾ ಜಿಲ್ಲಾ ಸಮಾಲೋಚಕರುಗಳಿಗೆ ತರಬೇತಿ ನೀಡಲಾಯಿತು. ಸಹಾಯಕ ನಿರ್ದೇಶಕರು, ಯುನಿಸೆಫ್ ರಾಜ್ಯ ಸಂಯೋಜಕರು, HRD ಮತ್ತು IMIS ರಾಜ್ಯ ಸಮಾಲೋಚಕರು ವೀಡಿಯೋ ಕಾನ್ಫರೆನ್ಸ್ ಮೂಲಕ ತರಬೇತಿ ನೀಡಿದರು.

ನೀರು – ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ
**ಪರಿಹಾರ ಸಹಾಯವಾಣಿ 94809 85555 ಗೆ ಕರೆ ಮಾಡಿ.**